**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹುಕ್ಕೇರಿ**

**ಸಿಸಿ ನಂ ಃ 1679/2023**

**ಸಿಡಬ್ಲು ಃ 1**

**ಪಿಡಬ್ಲು ಃ 1**

**ಹೆಸರು** ಃ ರವೀಂದ್ರ ಭೀಮಣ್ಣಾ ಸಕಲಕನವರ

**ವಯಾ** ಃ 50 ವರ್ಷ

**ಉದ್ಯೋಗ** ಃ ಒಕ್ಕಲುತನ

**ವಾಸ** ಃ ನಂದಗಾವ ತಾಃ ಅಥಣಿ ಜಿಃ ಬೆಳಗಾವಿ

**(ದಿನಾಂಕಃ 04-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು)**

**ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ ಃ**

ಅಪಘಾತದಲ್ಲಿ ಮೃತ ಪಟ್ಟ ಜಯಪಾಲ ಮತುತ ಜುಯಶ್ರೀ ನನ್ನ ಕಾಕಾನ ಮಕ್ಕಳು. ಪೃಥ್ವಿರಾಜ ಜಯಪಾಲ ಇವರ ಮಗ. ಚಾಸಾ-8 ಅಕ್ಕಾತಾಯಿ ಮೃತ ಜಯಪಾಲನ ತಾಯಿ. ಚಾಸಾ-10 ಅವರ ಕಾರ ಡ್ರೈವರ . ಚಾಸಾ -14 ಶಾಂತಿನಾಥ ನನಗೆ ದಿನಾಂಕ 2023 ರ 2ನೇ ದಿನಾಂಕದಂದು (ತಿಂಗಳು ನೆನಪಿಲ್ಲ) ನನಗೆ ಫೋನ ಮಾಡಿ ಈ ರೀತಿ ಅಪಘಾತ ಆಗಿದೆ ಎಂದು ಹೇಳಿದರು. ಆ ದಿನ ಜಯಪಾಲ ಮತ್ತು ಆತನ ಮಗ ಹಾಗೂ ಆತನ ತಾಯಿ ಹಾಗೂ ತಂಗಿ ಜಯಶ್ರೀ ಇವರು ಬೆಳಗಾವಿಯ ಆಸ್ಪತ್ರೆಗೆ ತೋರಿಸಿಕೊಂಡು ಬರಲು ಬಾಡಿಗೆ ಕಾರ ಮಾಡಿಕೊಂಡು ಹುಕ್ಕೇರಿ ಮಾರ್ಗವಾಗಿ ಹೋಗಿ ಬರುತ್ತಿದ್ದಾಗ ಹುಕ್ಕೇರಿ ಸಮೀಪ 1 ಕಿ.ಮೀ ಅಂತರದಲ್ಲಿ ಬೆಳಗಾವಿ ರಸ್ತೆಯಲ್ಲಿ ಅಪಘಾತ ಆಗಿದೆ ಎಂದು ನನಗೆ ಸಾಯಂಕಾಲ 6 ಗಂಟೆಗೆ ಫೋನ ಬಂತು . ನಾನು ಸೀದ ಹುಕ್ಕೇರಿ ಸರಕಾರಿ ದವಾಖಾನೆಗೆ ಹೋದೆ. ಅಲ್ಲಿ ಜಯಪಾಲ ಮತ್ತು ಜಯಶ್ರೀ ತೀರಿಕೊಂಡಿದ್ದರು. ಅವರ ಮಗ ಪೃಥ್ವಿರಾಜನಿಗೆ ಕೈಗೆ ಪೆಟ್ಟಾಗಿತ್ತು , ಮತ್ತು ಅಕ್ಕಾತಾಯಿ ಇವರಿಗೆ ಮೈಮೇಲೆ ಕಚ್ಚಾಗಿತ್ತು . ಕಾರ ಡ್ರೈವರನ ಕಾಲು ಮುರಿದಿತ್ತು . ನಾನು ಪೋಲಿಸರಿಗೆ ಕಂಪ್ಲೆಂಟ ಕೊಟ್ಟೆ . ಜಯಪಾಲ ಬರುತ್ತಿದ್ದ ಮಾರುತಿ ಸ್ವಿಫ್ಟ ಗಾಡಿ ಎದುರುಗಡೆಯಿಂದ ಬರುತ್ತಿದ್ದ ಮತ್ತೊಂದು ಗಾಡಿಗೆ ಡಿಕ್ಕಿ ಹೊಡೆದು ಅಪಘಾತ ಆಗಿರುತ್ತದೆ.

ಅಪಘಾತ ಹೇಗೆ ಆಯಿತು ಎಂದು ನನಗೆ ನಿಖರವಾಗಿ ಗೊತ್ತಾಗಿಲ್ಲ . ಶಾಂತಿನಾಥ ಬೆಳಗಾವಿಯಿಂದ ವಾಪಸ ನಮ್ಮ ಊರಿಗೆ ಬರುತ್ತಿರುವಾಗ ಈ ಅಪಘಾತ ನೋಡಿ ನನಗೆ ಫೋನ ಮಾಡಿ ಹೇಳಿದರು . ಫೋನ ಮಾಡಿದಾಗ ಸಂಜೆ 6-00 ಗಂಟೆ ಆಗಿತ್ತು . ನಾನು ಅಪಘಾತ ಸ್ಥಳಕ್ಕೆ ಹೋಗಿ ನೋಡಿ ಅಪಘಾತ ನೋಡಿದವರನ್ನು ಕೇಳಿ ದೂರು ಕೊಟ್ಟಿದ್ದೇನೆ . ದೂರನ್ನು ನಿ.ಪಿ-1 ಎಂದು ಸಾಕ್ಷಿ ಸಹಿ ನಿ.ಪಿ-1(ಎ) ಎಂದು ಗುರುತಿಸಲಾಯಿತು.

ಜಯಪಾಲ ಇವರ ಶವ ಪಂಚನಾಮೆ ಸಮಯದಲ್ಲಿ ಪೋಲಿಸರು ನನ್ನ , ಚಾಸಾ-2 ಮತ್ತು 3 ಇವರ ಸಮಕ್ಷಮ ನಿ.ಪಿ-2 ರಂತೆ ಶವ ಪಂಚನಾಮೆ ಮಾಡಿ ನಿ.ಪಿ-3 ರಂತೆ ಫೊಟೊ ತೆಗೆದರು. ಹಾಗೂ ಜಯಶ್ರೀ ಇವರ ಶವ ಪಂಚನಾಮೆ ಸಮಯದಲ್ಲಿ ಪೋಲಿಸರು ನನ್ನ ,ಚಾಸಾ-4 ಮತ್ತು 5 ಇವರ ಸಮಕ್ಷಮ ನಿ.ಪಿ-4 ರಂತೆ ಶವ ಪಂಚನಾಮೆ ಮಾಡಿ ನಿ.ಪಿ-5 ರಂತೆ ಫೊಟೊ ತೆಗೆದರು. ಹಾಗೂ ನಿ.ಪಿ-6 ರಂತೆ ಅಪಘಾತ ಸ್ಥಳದ ಪಂಚನಾಮೆ ಮಾಡಿ ನಿ.ಪಿ-7 ರಂತೆ ಕಚ್ಚಾ ನಕಾಶೆ ತಯಾರಿಸಿ, ನಿ.ಪಿ-8 ರಂತೆ ಫೊಟೊ ತೆಗೆದರು. ಸಳ ಪಂಚನಾಮೆ ಮೇಲೆ ಇರುವ ಸಾಕ್ಷಿ ಸಹಿಯನ್ನು ನಿ.ಪಿ-6(ಎ) ಮತ್ತು ನಿ.ಪಿ-7(ಎ) ಎಂದು ಗುರುತಿಸಲಾಯಿತು. ಪೊಲಿಸರು ನನ್ನ ಸಮಕ್ಷಮ ವಾಹನ ತಡೆ ಪಂಚನಾಮೆ ಮಾಡಿ ವಾಹನಗಳನ್ನು ತಮ್ಮ ವಶಕ್ಕೆ ಪಡೆದರು ಎಂದರೆ ನಿಜ . ಸದರಿ ಪಂಚನಾಮೆಯಿನ್ನು ನಿ.ಪಿ-9 ಎಂದು ಸಾಕ್ಷಿ ಸಹಿ ನಿ.ಪಿ-9(ಎ) ಎಂದು ಗುರುತಿಸಲಾಯಿತು. ಹಾಗೂ ಅಂದು ತೆಗೆದ 8 ಫೊಟೊಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿ.ಪಿ-10 ರಿಂದ 17 ಎಂದು ಗುರುತಿಸಲಾಯಿತು.

**( ಈ ಹಂತದಲ್ಲಿ ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ವಾಟೀ ಸವಾಲು ಮಾಡಲು, ಸಸಅ ರವರು ಮನವಿ ಮಾಡಿರುತ್ತಾರೆ. ಸದ್ರಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ, ಸದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

<u>ಪಾಟಿ ಸವಾಲುಃ ಸರಕಾರಿ ಸಹಾಯಕ ಅಭಿಯೋಜಕರಿಂದ -</u>

ದಿನಾಂಕ 02-05-2023 ರಂದು ಬೆಳಿಗ್ಗೆ 7 ಗಂಟೆಗೆ ಜಯಪಾಲ ಹಾಗೂ ಆತನ ಮಗ ಪೃಥ್ವಿರಾಜ , ಜಯಶ್ರೀ ಸೇರಿಕೊಂಡು ಜಯಪಾಲನ ತಾಯಿ ಅಕ್ಕಾತಾಯಿಗೆ ಬೆಳಗಾವಿಯ ಅಪೂರ್ವ ಆಸ್ಪತ್ರೆಗೆ ಕರೆದುಕೊಂಡು ಹೋಗಿ ವಾಪಸ ಸಂಜೆ 5-15 ಕ್ಕೆ ಹಕ್ಕೇರಿ ಬೆಳಗಾವಿ ರಸ್ತೆಯಲ್ಲಿ ಬರುತ್ತಿದ್ದಾಗ , ಅವರು ಇದ್ದಂತಹ ಮಾರುತಿ ಸ್ವಿಫ್ಟ ಕಾರ ನಂ. ಕೆಎ -59 0946 ಗೆ

ಮತ್ತೋಂದು ಮಹೀಂದ್ರಾ  ಎಕ್ಸ ಇವಿ ಕಾರ ವೇಗವಾಗಿ ಎದುರುಗಡೆಯಿಂದ ಬಂದು ರಸ್ತೆ ಕಡೆಗೆ ಗಮನ ಕೊಡದೇ ತನ್ನ ಎದುರುಗಡೆ ಹೋಗುತ್ತಿದ್ದ ವಾಹನವನ್ನು ಓವರಟೇಕ ಮಾಡಿಕೊಂಡು ಬಂದು ಬಸವರಾಜ ಕೋಟ್ಯಾಳ ಇವರ ಮನೆಯ ಸಮೀಪ ಜಯಪಾಲನ ಕಾರಿಗೆ ಡಿಕ್ಕಿ ಹೊಡೆಸಿ ಅಪಘಾತದ ಸಂಗತಿಯನ್ನು ಪೋಲಿಸರಿಗೆ ತಿಳಿಸದೇ ವಾಹನವನ್ನು ಅಲ್ಲೇ ಬಿಟ್ಟು ಓಡಿ ಹೋದ ಎಂದರೆ ನಿಜ.

**ಪಾಟಿ ಸವಾಲುಃ  ಆರೋಪಿ  ಪರ ಶ್ರೀ ಕೆ ಎಲ್ ಜೆ  ವಕೀಲರಿಂದ -**

ಅಪಘಾತ ನಾನು ಕಣ್ಣಾರೆ ನೋಡಿಲ್ಲ. ಅಪಘಾತ ಆದ ಸುಮಾರು 4-5 ತಾಸುಗಳ ನಂತರ ನಾನು ಅಲ್ಲಿಗೆ ಬಂದಿದ್ದೆ .  ಯಾರ ತಪ್ಪಿನಿಂದ  ಅಪಘಾತ ಆಯಿತು ಎಂದು ನನಗೆ ಗೊತ್ತಿಲ್ಲ. ಅಪಘಾತ ಸ್ಥಳ ಪಂಚನಾಮೆ ಹಾಗೂ ವಾಹನ  ತಡೆ  ಪಂನಚನಾಮೆಗೆ ಪೋಲಿಸರ ಕೋರಿಗೆ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ನಿಜ. ಮೃತರ ಮನೆಯವರಿಗೆ ಪರಿಹಾರ ಕೊಡಿಸಲು ನಾನು ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**